# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು – 572 103
ದೂರವಾಣಿ: 0816–2254546, 0816–2255596, 0816–2255597 ಫ್ಯಾಕ್ಸ್: 0816–2270719

ಸಂಖ್ಯೆ:ತು.ವಿ: DST-SERB:ಖ.ಕೋ:2023–24/2177

ದಿನಾಂಕ: 15.09.2023

**ದರಪಟ್ಟಿ ಆಹ್ವಾನ (ವಿ.ವಿ ವೆಬ್ ಸೈಟ್ ಮುಖಾಂತರ)**

ವಿಷಯ: DST-SERB ಯ ಸಂಶೋಧನಾ ಯೋಜನೆಯಡಿಯ ಅನುದಾನದಲ್ಲಿ ಉಪಕರಣಗಳನ್ನು ಸರಬರಾಜು ಪಡೆಯಲು ದರಪಟ್ಟಿ ಆಹ್ವಾನಿಸುವ ಕುರಿತು.

ಉಲ್ಲೇಖ: 1. ಡಾ. ಗಿರೀಶ್ ಕೆ. ಎಸ್., ಪ್ರಧಾನ ಸಂಶೋಧಕರು ಮತ್ತು ಪ್ರಾಧ್ಯಾಪಕರು (DST-SERB Project), ಜೀವರಸಾಯನ ಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ತು.ವಿ.ತು ಇವರ ಮನವಿ ಪತ್ರವು ವಿವಿಯಲ್ಲಿ ಸ್ವೀಕೃತಗೊಂಡ ದಿನಾಂಕ: 08.09.2022

2. ವಿವಿ ಟೆಂಡರ್ ಅಧಿಸೂಚನೆ ಸಂಖ್ಯೆ:No.TUT/KSG/DST-SERB/LE/2023-24/1158 dated:05.07.2023 ರ ಸಭಾ ನಡಾವಳಿ ದಿನಾಂಕ:11.08.2023.

3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ: 15.09.2023 (ಕಂಡಿಕೆ–196).

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (01) ರ ಮನವಿಯ ಮೇರೆಗೆ DST-SERB ಯಿಂದ ಮಂಜೂರಾಗಿರುವ "Histone Induced Death and Aggregation: Mitigation by Quercetin and Quercetin and Quercetin-3 Rutinosie" ಸಂಶೋಧನಾ ಯೋಜನೆಯಡಿಯಲ್ಲಿ ಉಪಕರಣಗಳನ್ನು ಸರಬರಾಜು ಪಡೆಯಲು ಉಲ್ಲೇಖ (02) ರ ಸಭಾ ನಡಾವಳಿಗಳಂತೆ ಬಾಕಿ ಉಳಿದಿರುವ ಅನುದಾನದಲ್ಲಿ ಷರತ್ತು ಮತ್ತು ನಿಬಂಧನೆಗಳಿಗೊಳಪಟ್ಟು ಆಸಕ್ತ ನೋಂದಾಯಿತ ಸಂಸ್ಥೆಗಳಿಂದ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿರುವ ಪ್ರಯಾಯೋಗಿಕ ಉಪಕರಣಗಳಿಗೆ ದರಪಟ್ಟಿಗಳನ್ನು ಆಹ್ವಾನಿಸಲಾಗಿದೆ.

| Sl No | Description of Goods with Specification | Qty | Rate to be quoted Including all taxes and service |
|---|---|---|---|
| 1 | **Incubator –**<br>Temperature range ambient + 5°C to 110 °C Accuracy: +1° C<br>Dimensions: 35x 35x 35<br>Capacity Approx in Ltr: 45-50 Lters<br>No. of Shelves 2 or 3 | 01 | |
| 2 | **Balance –**<br>Capacity 200G – 300 G<br>Readability 0.001 G<br>Pan Size 80 Ø/90 Ø<br>Easy to red LCE Display<br>Overload protection design<br>Auto calibration with external weight | 01 | |

**ಷರತ್ತು ಮತ್ತು ನಿಬಂಧನೆಗಳು**

1. ಮುಚ್ಚಿದ ಲಕೋಟೆಯ ಮೇಲೆ **"Laboratory Equipments to DOSR in Bio Chemestry (DST-SERB)"** ಸರಬರಾಜು ಮಾಡಲು ದರಪಟ್ಟಿ ಎಂದು ನಮೂದಿಸುವುದು.
2. ತುಮಕೂರು ವಿಶ್ವವಿದ್ಯಾನಿಲಯವು **DSIR** ನೊಂದಾಣಿ ಪ್ರಮಾಣ ಪತ್ರವನ್ನು ಹೊಂದಿದ್ದು, ಅನ್ವಯಿಸಿದ್ದಲ್ಲಿ ಅದರಂತೆ ತೆರಿಗೆಯಲ್ಲಿ ವಿನಾಯಿತಿ ನೀಡಿ ದರಗಳನ್ನು ನಮೂದಿಸತಕ್ಕದ್ದು.
3. ದರಪಟ್ಟಿಯೊಂದಿಗೆ ತಮ್ಮ ಸಂಸ್ಥೆಯು ನೊಂದಾಣಿಯಾಗಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.
4. ಸದರಿ ದರಪಟ್ಟಿ ಆಹ್ವಾನದ ಸಾಮಗ್ರಿಗಳು/ಸೇವೆಗಳಿಗೆ ಒಂದು ಲಕ್ಷ ಮಿತಿಯೊಳಗಿರುತ್ತದೆ.
5. ದರಪಟ್ಟಿಯ ಜೊತೆಗೆ ಇತರೆ ಸರ್ಕಾರಿ ಇಲಾಖೆಗಳಿಗೆ ಸರಬರಾಜಿನ ಸಂಬಂಧದ ಕಾರ್ಯಾದೇಶಗಳು ಮತ್ತು ಸೇವಾ ತೃಪ್ತಿದಾಯಕ ಪ್ರಮಾಣ ಪತ್ರಗಳನ್ನು (**Performance/Satisfactory Certficate**) ಲಗತ್ತಿಸತಕ್ಕದ್ದು.
6. ದರಪಟ್ಟಿಗಳನ್ನು ಕುಲಸಚಿವರು, ವಿಶ್ವವಿದ್ಯಾನಿಲಯ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್.ರಸ್ತೆ ತುಮಕೂರು–572 103, ಇವರಿಗೆ ಮುದ್ದಾಂ ಅಥವಾ ಅಂಚೆಯ ಮೂಲಕ ತಲುಪಿಸಬಹುದು. ಅಂಚೆಯ ವಿಳಂಬಕ್ಕೆ ಅಥವಾ ಅಂಚೆಯು ತಲುಪದಿದ್ದಕ್ಕೆ ವಿಶ್ವವಿದ್ಯಾನಿಲಯವು ಜವಾಬ್ದಾರರಾಗುವುದಿಲ್ಲ.
7. ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 29.09.2023 ಅಪರಾಹ್ನ 03.00 ಗಂಟೆ.

8. ದರಪಟ್ಟಿಯನ್ನು **ದಿನಾಂಕ: 30.09.2023 ರಂದು ಅಪರಾಹ್ನ 12.00** ಕ್ಕೆ ತೆರೆಯಲಾಗುವುದು.

9. ಸಂಸ್ಥೆಯವರು ತಮ್ಮ ಸಂಸ್ಥೆಯ GSTIN No. ಮತ್ತು PAN No. ದಾಖಲೆಗಳನ್ನು ಕಡ್ಡಾಯವಾಗಿ ದರಪಟ್ಟಿಯ ಜೊತೆಗೆ ಲಗತ್ತಿಸಬೇಕು.

10. ದರಪಟ್ಟಿಯಲ್ಲಿ ನಮೂದಿಸಿದ ದರಗಳು ತೆರಿಗೆ ಮತ್ತು ಸೇವೆ ವೆಚ್ಚವನ್ನು ಒಳಗೊಂಡಿರತಕ್ಕದ್ದು.

11. ದರಪಟ್ಟಿಯ ಅವಧಿಯು ದರಪಟ್ಟಿಯನ್ನು ತೆರೆದ ದಿನಾಂಕದಿಂದ 60 ದಿನಗಳ ಅವಧಿಯವರೆಗೆ ಚಾಲ್ತಿಯಲ್ಲಿರಬೇಕು.

12. ದರಪಟ್ಟಿ ಸಲ್ಲಿಸುವ ಸಂಸ್ಥೆಯವರು ಅಧಿಕೃತ ಮಾರಾಟಗಾರರು/ಸರಬರಾಜುದಾರರು/ತಯಾರಕರು ಆಗಿದ್ದಲ್ಲಿ ದಾಖಲೆಗಳನ್ನು ಲಗತ್ತಿಸುವುದು.

13. ಸರಬರಾಜು ಮಾಡಿದ 30 ದಿನಗಳೊಳಗೆ ಹುಂಡಿಯನ್ನು ಪಾವತಿಸಲಾಗುವುದು.

14. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.

15. ವಿಶ್ವವಿದ್ಯಾನಿಲಯವು ಒಂದು ವೇಳೆ ತಮ್ಮ ದರಪಟ್ಟಿಯನ್ನು ತಾತ್ಕಾಲಿಕವಾಗಿ ಅಂಗೀಕರಿಸಿದ್ದಲ್ಲಿ **ಮಾದರಿ ಉಪಕರಣಗಳನ್ನು ವಿಶ್ವವಿದ್ಯಾನಿಲಯವು ಸೂಚಿಸುವಂತಹ** ವಿಭಾಗಕ್ಕೆ ಸಲ್ಲಿಸಿ ಪ್ರಚುರಪಡಿಸತಕ್ಕದ್ದು

16. ತಮ್ಮ ದರಪಟ್ಟಿಯಲ್ಲಿ ಪ್ರತಿ ಸಾಮಗ್ರಿವಾರು ದರಗಳನ್ನು ನಮೂದಿಸುವುದು. (ಎಲ್ಲಾ ತೆರಿಗೆ ಮತ್ತು ಸರಬರಾಜು ವೆಚ್ಚ ಒಳಗೊಂಡಿರತಕ್ಕದ್ದು.)

17. ತಮ್ಮ ಸಂಸ್ಥೆಯು ಸರಬರಾಜು ಮಾಡಲು ಉದ್ದೇಶಿಸಿರುವ ಪ್ರಯೋಗಾಲಯದ **ಉಪಕರಣಗಳ** ಸಂರಚನೆಗಳಲ್ಲಿ ವ್ಯತ್ಯಾಸ ಇದ್ದರೆ ಸಂರಚನೆಗಳ ಮಾಹಿತಿ/ಮಾದರಿ ಸಂಖ್ಯೆಗಳನ್ನು ದರಪಟ್ಟಿಯೊಂದಿಗೆ ಕಡ್ಡಾಯವಾಗಿ ಸಲ್ಲಿಸುವುದು.

18. ದರಪಟ್ಟಿಗಳನ್ನು ಯಾವುದೇ ಕಾರಣ ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಸಂಪೂರ್ಣ ಹಕ್ಕನ್ನು ವಿಶ್ವವಿದ್ಯಾನಿಲಯವು ಕಾಯ್ದಿರಿಸಿಕೊಂಡಿದೆ.

19. ಸಂಸ್ಥೆಯ ಯಾವುದೇ ಷರತ್ತುಬದ್ಧ ದರಪಟ್ಟಿಗಳನ್ನು ಪರಿಗಣಿಸಲಾಗುವುದಿಲ್ಲ.

20. ಪ್ರತಿ ಸಂಸ್ಥೆಯವರು ಏಕೈಕ ದರಪಟ್ಟಿಯನ್ನು ಮಾತ್ರ ಸಲ್ಲಿಸತಕ್ಕದ್ದು.

21. ವಿಶ್ವವಿದ್ಯಾನಿಲಯವು ಕಾರ್ಯಾದೇಶದಲ್ಲಿ ನೀಡುವ ಎಲ್ಲಾ ಷರತ್ತುಗಳನ್ನು ಪಾಲಿಸಬೇಕು.

22. ಹೆಚ್ಚಿನ ವಿವರಗಳು ಅಥವಾ ಮಾಹಿತಿಯ ಅಗತ್ಯವಿದ್ದಲ್ಲಿ ಡಾ. ಗಿರೀಶ್ ಕೆ. ಎಸ್., ಪ್ರಧಾನ ಸಂಶೋಧಕರು ಮತ್ತು ಪ್ರಾಧ್ಯಾಪಕರು (DST-SERB Project), ಜೀವರಸಾಯನ ಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ , ವಿಶ್ವವಿದ್ಯಾನಿಲಯ ವಿಜ್ಞಾನ ಕಾಲೇಜು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸಬಹುದು.

**ಆದೇಶದ ಮೇರೆಗೆ,**

Mangalahouri M.

ಉಪಕುಲಸಚಿವರು

**ಉಪಕುಲಸಚಿವರು**
(ಸ್ಥಾಪನಾ ವಿಭಾಗ)
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಪ್ರತಿಗಳು:

1. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಸಿಸ್ಟಂ ಅನಾಲಿಸಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಇಂದೇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ)
3. ಡಾ. ಗಿರೀಶ್ ಕೆ. ಎಸ್., ಪ್ರಧಾನ ಸಂಶೋಧಕರು ಮತ್ತು ಪ್ರಾಧ್ಯಾಪಕರು (DST-SERB Project), ಜೀವರಸಾಯನ ಶಾಸ್ತ್ರ ಅಧ್ಯಯನ & ಸಂಶೋಧನಾ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ತುಮಕೂರು ವಿಶ್ವವಿದ್ಯಾನಿಲಯದ ಸೂಚನಾ ಫಲಕ.
5. ಕಚೇರಿ ಪ್ರತಿ.